# ಅಧ್ಯಾಯ 41

**ಓಂ ಗಣೇಶಾಯ ನಮಃ　　ಸದ್ಗುರು ಸಿದ್ಧಾರೂಢ ನಮಃ**



ಛಂದ :- ಯಮನ  ದೂತರು ಪಾಶವನು ಹಾಕುತ್ತಲೆ ಭಕ್ತಳ ರಕ್ಷಿಸಿ
ಅಮಳ  ನಿಜ ಲೋಕಕೆ ವಿಮಾನದಿ ಕರೆದುಕೊಂಡು ಕರುಣಿಸಿ ಇಂಥ
ಸದ್ಗುರುರಾಯನೇ ಶರಣರಿಗೆ ಕರುಣಾ ಚಂದ್ರನೇ ಎಂಥರಿಗೂ ಪದ
ಕಮಲ ಸ್ಪರ್ಶದಿ ಉದ್ಧರಿಸು ಭಕ್ತಂದ್ರನೇ..

ಶ್ರೀ ಸಿದ್ಧಾರೂಢ ಭಗವಂತನು ಪ್ರಾಣಿ ಮಾತ್ರರಿಗೆ ಬಹು ಕೃಪಾವಂತನಿದ್ದಾನೆ. ಆತನ ನಮೋಚ್ಚಾರ ಮಾಡಿದರೆ ಮೂರ್ತಿಮಂತನಾಗಿ ಪ್ರತ್ಯಕ್ಷ ಕಾಣಿಸಿಕೊಳ್ಳುವನು. ನಾಮದ ಹೊರತು ಗತಿಯೇ ಇಲ್ಲ. ಈ ಕಲಿಯುಗದಲ್ಲಿ ಇತರ ಸಾಧನಗಳೆಲ್ಲ ವ್ಯರ್ಥವಾಗಿರುತ್ತವೆ. ಇಷ್ಟೇ ಅಲ್ಲ, ಕೆಲವು ಘಾತುಕವಾಗಿಯೂ ಇರುತ್ತವೆ. ಯೋಗಸಾಧನ ಮಾಡಬೇಕೆಂದರೆ, ಅದೂ ಗುರುವಿನ ಹೊರತು ಅಭ್ಯಾಸಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಗುರು ಹುಡುಕಲಿಕ್ಕೆ ಹೋಗಬೇಕು. ಯೋಗ್ಯ ಗುರು ಸಿಗುವದಾದರೂ ದುರ್ಲಭವೇ ಸರಿ. ತಾನಾಗಿ ಯೋಗ ಸಾಧಿಸುವನೆಂದು ಯತ್ನಿಸಿದರೆ, ಸ್ವಲ್ಪ ತಪ್ಪಿದರೆ ಹುಚ್ಚು ಹಿಡಿಯುತ್ತದೆ. ಒಂದು ವೇಳೆ ಯೋಗವನ್ನು ಸಾಧಿಸಿದರೂ ಬ್ರಹ್ಮಜ್ಞಾನ ಪ್ರಾಪ್ತಿಯಾಗದು. ಇದು ವಿಚಾರದಿಂದಲೇ ಪ್ರಾಪ್ಯವು ವೇದಾಂತ ವಿಚಾರ ಬಹಳ ಕಠಿಣವಾಗಿದ್ದು, ಸದ್ಗುರು ಮುಖದಿಂದ ಶ್ರವಣ ಮಾಡಿದ ವಿನಹಾ ಅದರ ಮರ್ಮ ತಿಳಿಯದು. ಅಂಥ ಸದ್ಗುರುವನ್ನು ಬಹುಕಾಲ ಸೇವಿಸುತ್ತ ಇದ್ದರೆ ಅವನು ಕೃಪೆ ಮಾಡಿ

ಶ್ರುತ್ಯರ್ಥವನ್ನು ವಿವರಿಸಿ ಹೇಳುತ್ತಾನೆ. ಆದರೆ ಸಂಸಾರದಲ್ಲಿ ಬದ್ಧರಾಗಿರುವ ಎಲ್ಲಾ ಜನರಿಗೆ ಇದು ಸಾಧ್ಯವಿಲ್ಲ. ಇಂಥವರಿಗೆ ನಾಮಸ್ಮರಣೆಯ ಬಿಟ್ಟು ಸುಖವೇ ಇಲ್ಲ. ಅನ್ಯವೆಲ್ಲವು ದುಃಖಮಯವಾಗಿರುತ್ತದೆ. ಈ ನಾಮದ ಬಲದಿಂದ ಭಕ್ತರು ಕಾಲನಿಗೆ ಸಹಾ ಅಂಜುವುದಿಲ್ಲ. ಸದ್ಗುರುಗಳು ಆ ನಾಮವನ್ನು ಆಜ್ಞಾಪಿಸಿದನೆಂದರೆ, ಆಗ ಅದು ನಿಶ್ಚಯವಾಗಿ ಫಲ ಕೊಡುವುದು. ಆದ್ದರಿಂದಲೇ ಸದ್ಗುರುಗಳ ಹತ್ತಿರ ಹೋಗಿ, ಒಂದು ಸಾರಿ ನಾಮೋಪದೇಶ ತೆಗೆದುಕೊಳ್ಳಬೇಕು. ಅದನ್ನು ಜಪಿಸುತ್ತ ಸುಖದಿಂದ ಮನೆಯಲ್ಲಿಯೇ ಇರಬೇಕು. ಸದ್ಗುರುವು ಅಲ್ಲಿಗೇ ಬರುತ್ತಾನೆ. ನಾಮಧಾರಕನ ಮನೆಯಲ್ಲಿ ಸದ್ಗುರುವು ಒಳ ಹೊರಗೆ ಇರುತ್ತಾನೆ, ಮತ್ತು ಭಕ್ತನನ್ನು ಕೈಹಿಡಿದು ಬ್ರಹ್ಮದ ಮೇಲೆ ಒಯ್ದು ಕೂಡ್ರಿಸುತ್ತಾನೆ. ಇರಲಿ, ಈಗ ಕಥಾನುಸಂಧಾನವೆಂದರೆ - ವಿರೂಪಾಕ್ಷನೆಂಬ ಒಬ್ಬ ಭಕ್ತನಿರುವನು. ಆತನಿಗೆ ಹಿರೂಬಾಯಿಯೆಂಬ ಸುಗುಣೆಯಾದ ತಾಯಿ ಇರುವಳು. ಆಕೆಯು ಬಹಳ ವೃದ್ಧೆಯು ಆಗಿದ್ದು, ನಿತ್ಯದಲ್ಲಿಯೂ ಬಹು ಪ್ರೇಮದಿಂದ ಸಿದ್ಧ ಸದ್ಗುರು ನಾಮವನ್ನು

ಜಪಿಸುತ್ತಿರುವವಳು. ಮತ್ತು ಒಂದೂ ದಿನ ತಪ್ಪದೆ ಪ್ರತಿ ದಿವಸ ಪುರಾಣ ಶ್ರವಣಕ್ಕೆ ಬಹು ಶ್ರದ್ಧಾಯುಕ್ತಳಾಗಿ ಹೋಗುತ್ತಿದ್ದಳು. ಒಂದು ದಿವಸ ಆಕೆಯು ಪುರಾಣಕ್ಕೆ ಹೋಗುವಾಗ ದಾರಿಯಲ್ಲಿ ಒಂದು ಕಲ್ಲಿಗೆ ಕಾಲು ತಗಲಿ ಬಿದ್ದಳು. "ಸದ್ಗುರುನಾಥಾ' ಎಂದು ಕೂಗಿ, ಏಳಲಿಕ್ಕೆ ನೋಡಿದಳು. ಆದರೆ ಏಳಲಿಕ್ಕಾಗಲಿಲ್ಲ. ಆಗ ಸಮೀಪ ಇದ್ದವರು ಆಕೆಯನ್ನು ಎತ್ತಿ ಮನೆಗೆ ಕರೆದುಕೊಂಡು ಹೋದರು. ಆಕೆಯ ಕಾಲಿನ ಎಲುಬು ಮುರಿದು ನಡಿಯಲಿಕ್ಕೆ ಬಾರದಂತಾಯಿತು. ಆಗ ಸಿದ್ದಾರೂಢರನ್ನು ಮನೆಗೆ ಕರೆಸಿ, ಅವರನ್ನು ಪಾದ ಪೂಜೆಯಿಂದ ಸಂತೋಷಪಡಿಸಿ, ಆ ವೃದ್ಧೆಯು ವಿಚಾರಿಸುವಂಥವಳಾದಳು, -"ಪುಣ್ಯ ಕಾರ್ಯಕ್ಕೆ ಹೋಗುವಾಗ ಈ ದುಃಖವು ಯಾಕೆ ಪ್ರಾಪ್ತವಾಯಿತು ?" ಎಂಬುದಕ್ಕೆ ಶ್ರೀಗುರುಗಳು - "ನಿನ್ನ ಆಯುಷ್ಯವು ಮುಗಿದಿತ್ತು. ಆದರೆ ಪುರಾಣಕ್ಕೆ ಹೋಗುತ್ತಿದ್ದಿ ಎಂದು ಚಲೋದಾಯಿತು. ನಿನ್ನನ್ನು ಸದ್ಗುರುವರನು ರಕ್ಷಿಸಿದನು." ಎಂದು ಹೇಳಿ ಸಿದ್ಧಾಶ್ರಮಕ್ಕೆ ತೆರಳಿದರು. ಹಿರೂಬಾಯಿಯು ಸರ್ವ ಕಾಲವನ್ನು ನಾಮ ಚಿಂತನದಲ್ಲಿಯೇ ಕಳೆಯುತ್ತಿದ್ದಳು. ಕಾಲು

ಮುರಿದು ಈ ಪ್ರಕಾರ ಆಕೆಯು ಮನೆಯೊಳಗೆ ಬಿದ್ದಿರುವಾಗ,
ತನ್ನ ಮಗನಾದ ವಿರೂಪಾಕ್ಷನಿಗೆ ಹೇಳುತ್ತಾಳೆ- 'ನಿತ್ಯದಲ್ಲಿ
ನೀನು ಪುರಾಣವನ್ನು ಕೇಳಿ, ಮನೆಗೆ ಬಂದು, ನನಗೆ ಪುರಾಣ
ಕಥೆಯನ್ನು ಸವಿಸ್ತಾರವಾಗಿ ಹೇಳತಕ್ಕದ್ದು." ಆಕೆಯ
ಇಚ್ಛೆಯಂತೆ ವಿರೂಪಾಕ್ಷಪ್ಪನು ನಿತ್ಯ ಹೇಳುತ್ತಿದ್ದು, ಒಂದು ದಿನ
ಮಾರ್ಕಂಡೇಯ ಋಷಿಯ ಕಥೆಯನ್ನು ಆಕೆಗೆ ಹೇಳಿದನು.
ಮರಣಕಾಲದಲ್ಲಿ ಶೂಲಪಾಣಿಯನ್ನು ಚಿಂತಿಸಿದ ಮಾತ್ರದಿಂದ,
ಆ ದೇವನು ಬಂದು ಯಮನನ್ನು ಓಡಿಸಿದನು. ಎಂಬ
ಕಥೆಯನ್ನು ಕೇಳಿ, ಹಿರೂಬಾಯಿಯು - "ಹಾಗಾದರೆ ನಮ್ಮ
ದೈವತವಾದ ಸಿದ್ಧ ಗುರುವಿನ ಧ್ಯಾನ ಮಾಡಿದರೂ
ಮರಣಕಾಲದಲ್ಲಿ ಆತನು ನಿಶ್ಚಯವಾಗಿ ಬಂದು ನನ್ನನ್ನು
ರಕ್ಷಿಸುವನು," ಎಂದು ತಿಳಿದು ಸದ್ಗುರು ನಾಮವನ್ನು
ಅಂದಿನಿಂದ ಕ್ಷಣವಾದರೂ ಮರೆಯದೆ, ನಿತ್ಯವೂ ಸದ್ಗುರು
ರೂಪವನ್ನು ಹೃದಯದಲ್ಲಿ ಕಾಣುತ್ತಿದ್ದಳು. ಹೀಗಿರುತ್ತಾ
ಒಂದಾನೊಂದು ದಿವಸ ಭೋಜನವಾದ ನಂತರ,
ಅಕಸ್ಮಾತ್ತಾಗಿ ಆಕೆಯ ಮಸ್ತಕ

ಭ್ರಮಣವಾಗಲಾರಂಭಿಸಿತು.ಕೂಡಲೇ ಆಕೆಯು ತನ್ನೆದುರಿಗೆ ಇಬ್ಬರು ಭಯಂಕರ ಪುರುಷರು ನಿಂತಿರುವದನ್ನು ಕಂಡಳು. ಅವರ ರೂಪವು ಉಗ್ರವಾಗಿದ್ದು, ನಾಲಿಗೆಯು ಜೋತಾಡುತ್ತಿತ್ತು. ಶರೀರಗಳು ಅಂಧಕಾರವೇ ಎಂಬಂತೆ ಕುಣಿಯುತ್ತಿದ್ದವು. ಕೆಂಪಾದ ಕಣ್ಣುಗಳನ್ನು ತಿರುಗಿಸುತ್ತಾ, ಆ ಹಿರೂಬಾಯಿಗೆ ಒದರಲಿಕ್ಕೆ ಆರಂಭಿಸಿದರು. ಆಕೆಯಾದರೂ ಗುರು ರೂಪವನ್ನು ಚಿತ್ತದಲ್ಲಿ ಧರಿಸಿ ಆತನನ್ನೇ ಕರೆಯುವಂಥವಳಾಗಿ - "ಸದ್ಗುರು ಸಿದ್ಧಾರೂಢನಾಥನೇ, ನನ್ನ ರಕ್ಷಕನಾಗಿ ಬಾರಪ್ಪಾ, ಈ ಯಮದೂತರ ಕೈಯಿಂದ ನನ್ನನ್ನು ರಕ್ಷಿಸುವದಕ್ಕೋಸ್ಕರ ಬೇಗನೆ ಬಾ. ನನಗೆ ಈ ಶರೀರ ಬದುಕಿಸಬೇಕೆಂಬ ಇಚ್ಛೆ ಇಲ್ಲ. ಆದರೆ ಪುರಾಣ ಕೇಳಬೇಕೆಂಬ ನನ್ನ ಮನೋರಥವು ಇರುತ್ತದೆ. ಈ ಪೀಡೆಯು ನನ್ನ ಆಯುಷ್ಯ ನಾಶ ಮಾಡಿತು. ಗುರು ಮುಖದಿಂದ ಕೇಳತಕ್ಕಂಥಾ ಬೋಧವು ಕೇಳಲಿಲ್ಲ. ಗುರು ಮುಖದಿಂದ ಶ್ರವಣ ಮಾಡಿದ ನಂತರ ಸುಖದಿಂದ ನಾನು ದೇಹವನ್ನು ಬಿಡುವೆನು", ಎಂದು ಈ ಪ್ರಕಾರ ಪ್ರಾರ್ಥಿಸಿದ ಕೂಡಲೇ ಸಿದ್ಧ ಸದ್ಗುರುವು

ಪ್ರಕಟನಾದನು. ಹಿರೂಬಾಯಿಯು ತನ್ನ ಸಮೀಪದಲ್ಲಿಯೇ ಸದ್ಗುರುನಾಥನನ್ನು ಕಂಡು, ಧೈರ್ಯಗೊಂಡವಳಾಗಿ, ಯಮಧೂತರನ್ನು ಕುರಿತು - "ನಾನು ನಿಮ್ಮ ಕೂಡ ಬರುವದಿಲ್ಲ ನಡೀರಿ. ನನ್ನ ಈ ದುಃಖವು ಪರಿಹಾರವಾಗಿ, ಸಿದ್ಧಾರೂಢ ಸ್ಥಾನಕ್ಕೆ ಹೋಗಿ ಅವರಿಂದ ಉಪದೇಶವನ್ನು ಪಡೆದುಕೊಂಡ ಮೇಲೆ, ಅವರಾಜ್ಞೆಯಿಂದ ನಾನು ಬಂದೇನು. ಅಲ್ಲಿ ಪರ್ಯಂತ ನಾನು ಬರುವುದಿಲ್ಲ", ಎಂದು ಹೇಳಿದ್ದನ್ನು ಕೇಳಿ ಆ ಯಮದೂತರು "ಹಿಡಿ, ಹಿಡಿ' ಎಂದು ಘರ್ಜಿಸುತ್ತಾ, ಆಕೆಯ ಸಮೀಪ ಬಂದರು. ತಮ್ಮ ಪಾಶಗಳನ್ನ ಬಿಚ್ಚಿ, ಆಕೆಯ ಸುತ್ತಲು ಹಾಕಲಿಕ್ಕೆ ನೋಡುವಾಗ, ಹತ್ತಿರ ನಿಂತ ಸದ್ಗುರುವಿಗೆ ತಗಲಿ, ಆ ಕ್ಷಣವೇ ಹರಿದು ಬಿದ್ದವು. ಅವರ ಯತ್ನಗಳೆಲ್ಲ ವ್ಯರ್ಥವಾದವು. ಆಗ ಸದ್ಗುರುವು ದಂಡಧಾರಿಯಾಗಿ ದೂತರ ಮೇಲೆ ಹೋಗುವಂಥವನಾದನು. ಆತನನ್ನು ಕಂಡ ಕೂಡಲೇ ಆ ಯಮದೂತರು ಭಯಂಕರವಾಗಿ ಕೂಗುತ್ತ ಓಟಾ ಹಿಡದರು. ಓಡುತ್ತಾ ಯಮನಗರಿಗೆ ಬಂದು, ಯಮನನ್ನು ಕುರಿತು - "ನೋಡಿರಿ, ನಿಮ್ಮ ಕೆಲಸವನ್ನು ಬರೋಬ್ಬರಿ

ರೀತಿಯಿಂದ ನಾವು ನಡೆಸುತ್ತಿರುವಾಗ ಯಾವನೋ ಒಬ್ಬ ಯತೀಶ್ವರನು ನಮಗೆ ಅಡ್ಡ ಬಂದನು," ಎಂದು ಹೇಳಿದ್ದು ಕೇಳಿ, ಸರ್ವಜ್ಞನಾದ ಆ ಯಮನು - "ಎಲೆ ದೂತರುಗಳಿರಾ, ಸಿದ್ಧರಾಯರನ್ನು ನೀವು ತಿಳಿಯದೇ ಹೋದಿರಿ. ಈ ಕಾಲದಲ್ಲಿ ಜಗತ್ತಿನಲ್ಲಿ ಈಶ್ವರಾವತಾರವೆಂದರೆ ಆತನೇ. ಆತನ ಭಕ್ತರನ್ನು ನೀವು ತರಲಿಕ್ಕೆ ನೋಡಿದರೆ, ಆತನಿಂದ ರಕ್ಷಿತನಾದ ಅವರ ಮೇಲೆ ನಿಮ್ಮ ಸತ್ತಾ ನಡಿಯಲಾರದು. ಸರ್ವ ಜಗತ್ತಿನ ನಿಯಂತನಿದ್ದು, ಸರ್ವ ಕರ್ತಾ ಹರ್ತಾ ಆತನೇ ಇರುವನು' ಎಂದು ದೂತರನ್ನು ಕುರಿತು ಹೇಳಿದನು. ಇತ್ತ ಸದ್ಗುರುಗಳನ್ನು ಕುರಿತು, ಹಿರೂಬಾಯಿಯು "ಹೇ ದಯಾಳುವೇ, ಯಮನಿಂದ ನನ್ನನ್ನು ಬಿಡಿಸಿದಿ. ಇನ್ನಾದರೂ ನನ್ನ ಕಾಲಿಗೆ ಶಕ್ತಿ ಕೊಡು," ಎಂದು ಹೇಳಿದ್ದು ಕೇಳಿ ಸಿದ್ಧರು-"ನೀನು ಇನ್ನು ಆರು ತಿಂಗಳ ಆಯುಷ್ಯ ತೆಗೆದುಕೊ. ಅಲ್ಲಿವರೆಗೆ ನಿನ್ನ ಆಯುಷ್ಯದ ಸಾಫಲ್ಯ ಮಾಡಿಕೋ. ಅನಂತರ ನನ್ನ ಲೋಕಕ್ಕೆ ನೀನು ಬರುವಿ. ಸ್ವಸ್ಥಚಿತ್ತದಿಂದ ಭಜನೆಯನ್ನು ಮಾಡುತ್ತ ಇರು," ಈ ಪ್ರಕಾರ ಸದ್ಗುರುಗಳು ಅಂದು, ತಮ್ಮ ಹಸ್ತದಿಂದ ಆಕೆಯ ಕಾಲಿಗೆ

ಸ್ಪರ್ಶಿಸಿದ ಕೂಡಲೇ ಆ ಹಿರೂಬಾಯಿಯು ಸಶಕ್ತಳಾಗಿ, ಎದ್ದು ನಿಂತಳು . ಅವಳು ಅತ್ಯಾನಂದಭರಿತಳಾಗಿ ಸದ್ಗುರುಗಳನ್ನು ನಮಿಸಿ, ಎದ್ದು ನೋಡಿದರೆ, ಅವರು ಅಂತರ್ಧಾನರಾಗಿರುವರು ಅವಳ ಮಗನಾದ ವಿರೂಪಾಕ್ಷಪ್ಪನು ಈ ಸಮೀಪದಲ್ಲಿಯೇ ಇದ್ದರೂ ಆತನಿಗೆ ಈ ಯಾವ ಸಂಗತಿಯೂ ಗೊತ್ತಾಗಲಿಲ್ಲ. ಮುದುಕಿ ಅಕಸ್ಮಾತ್ತಾಗಿ ಎದ್ದು ನಿಂತದ್ದನ್ನು ನೋಡಿ - ಅವ್ವಾ ನಿನ್ನ ಕಾಲುಗಳಿಗೆ ಒಮ್ಮೆಂದೊಮ್ಮೆ ಹ್ಯಾಗೆ ಶಕ್ತಿ ಬಂತು? ಎಂದು ಕೇಳಿದ್ದಕ್ಕೆ, ಆಕೆಯು ಸರ್ವ ವೃತ್ತಾಂತವನ್ನು ಕಥಿಸಿ, - "ಸದ್ಗುರುವು ನನ್ನನ್ನು ರಕ್ಷಿಸಿ, ನನಗೆ ಆರು ತಿಂಗಳ ಆಯುಷ್ಯವನ್ನು ಕೊಟ್ಟನು ಮತ್ತು ಪುರಾಣ ಶ್ರವಣಕ್ಕೊಸ್ಕರ ಹೋಗಲಿಕ್ಕೆ ನನ್ನನ್ನು ಸಶಕ್ತಳನ್ನಾಗಿ ಮಾಡಿದನು. ಇನ್ನೂ ಆರು ತಿಂಗಳಲ್ಲಿ ನನ್ನನ್ನು ತನ್ನ ನಿಜಪದಕ್ಕೆ ಕರೆದುಕೊಳ್ಳುವನೆಂದು ಹೇಳಿರುತ್ತಾನೆ' ಹೀಗಂದು ಆ ಹಿರೂಬಾಯಿಯ ವಚನವನ್ನು ಕೇಳಿ, ವಿರೂಪಾಕ್ಷನು ಬಹಳ ಆನಂದಪಟ್ಟನು. ಆನಂತರ ಆತನು ತಾಯಿಯನ್ನು ಮಠಕ್ಕೆ ಕರೆದುಕೊಂಡು ಹೋಗಿ, ಸದ್ಗುರು ಚರಣಗಳ ಭೇಟಿ ಮಾಡಿಸಿದನು. ಹಿರೂಬಾಯಿಯು

ಸದ್ಗುರುಗಳಿಗೆ, ಎಲ್ಲಾ ವೃತ್ತಾಂತವನ್ನು ನಿವೇದಿಸಿ, - 'ಹೇ ಸದ್ಗುರುವೇ , ಭಕ್ತರನ್ನು ನೀನು ಕಾಲನ ಕೈಯಿಂದ ರಕ್ಷಿಸುವಿ. ಭಕ್ತರ ಸಲುವಾಗಿ ಅವತಾರ ಧರಿಸಿಕೊಂಡು ಬಂದಿರುವ ಸಾಕ್ಷಾತ್ ಈಶ್ವರನೇ ನೀನಿರುವಿ. ಪೂರ್ವದಲ್ಲಿ ಯಾವಾಗ ಮಾರ್ಕಂಡೇಯ ಋಷಿಯು ನಿನ್ನನ್ನು ಪ್ರಾರ್ಥಿಸಿದನೋ ಆ ಕಾಲದಲ್ಲಿ ನೀನು ಬಂದು ಆತನನ್ನು ರಕ್ಷಿಸಿದಿ. ಅದೇ ಪ್ರಕಾರ, ಹೇ ದೇವನೇ , ನನ್ನನ್ನು ಯಮನ ಕೈಯಿಂದ ಬಿಡಿಸಿ ರಕ್ಷಿಸುವಂಥವನಾದಿ," ಎಂದು ಅನ್ನುವಂಥಾದ್ದು ಕೇಳಿ, ಸದ್ಗುರುಗಳು - "ನಿನ್ನ ಶುದ್ಧ ಭಾವಕ್ಕೆ ಒಲಿದನು. ಯಾವತನು ಆತನನ್ನು ಚಿಂತಿಸುತ್ತಾನೋ ಅಂಥವನನ್ನು ಆ ಸದ್ಗುರುವು ಯಮಪಾಶದಿಂದ ಬಿಡಿಸುವನು. ಆದರೂ ನೀನು ಸದ್ಗುರು ನಾಮವನ್ನು ಸರ್ವಥಾ ಮರೆಯಬೇಡ, ಅದನ್ನು ಅಖಂಡವಾಗಿ ಜಪಿಸುತ್ತಿದ್ದರೆ, ಭ್ರಮವೆಲ್ಲ ಪರಿಹಾರವಾಗಿ, ನಿಜ ವಿಶ್ರಾಮವನ್ನು ಹೊಂದಿ, ಆಮೇಲೆ ಸದ್ಗುರುಧಾಮವನ್ನು ಪ್ರಾಪ್ತಿ ಮಾಡಿಕೊಳ್ಳುವಿ," ಎಂದು ಅಂದರು. ಈ ಪ್ರಕಾರ ಸದ್ಗುರು ಮುಖದಿಂದ ಉಪದೇಶವನ್ನು ಕೇಳಿ, ಹಿರೂಬಾಯಿಯು

ಅತ್ಯಾನಂದ ಹೊಂದಿದವಳಾಗಿ, ಕ್ಷಣಮಾತ್ರ ಸಮಾಧಿ ಸುಖದಲ್ಲಿ ತಟಸ್ಥಳಾಗಿ ಕೂತು, ಆಮೇಲೆ ಎದ್ದು ಸದ್ಗುರು ಪಾದಕ್ಕೆ ರಗಿದಳು. ಸದ್ಗುರು ಉಪದೇಶವನ್ನು ಚಿತ್ತದಲ್ಲಿ ಧರಿಸಿ, ತನ್ನ ಪುತ್ರನ ಸಂಗಡ ಮನೆಗೆ ಬಂದಳು. ಅಂದಿನಿಂದ ಹಿರೂಬಾಯಿಯು ರಾತ್ರಿ ಹಗಲು ಸದ್ಗುರು ನಾಮವನ್ನು ಜೀವ ಪ್ರಾಣವೆಂಬಂತೆ ಜಪಿಸುತ್ತಿದ್ದಳು. ಆರು ತಿಂಗಳು ಮುಗಿದವು. ಒಂದು ದಿನ ಹಿರೂಬಾಯಿಯು ನಿದ್ದೆ ಹೋಗುತ್ತಿರುವಾಗ ಸದ್ಗುರುಗಳು ಬಂದು ಆಕೆಯನ್ನು ಎಬ್ಬಿಸಿ, -"ಈಗಲೇ ಎದ್ದು ಬಾ" ಎಂದು ಹೇಳಿದರು. ಹಿರೂಬಾಯಿಯು ಎದ್ದು ನೋಡುವಾಗ ಸದ್ಗುರುಗಳು, ಮುಖದ ಮೇಲೆ ಅದ್ಭುತ ತೇಜಯುಕ್ತರಾಗಿಯೂ, ಅತಿಸುಂದರ ಸ್ವರೂಪ ಉಳ್ಳವರಾಗಿಯೂ, ಇರುವುದನ್ನು ಕಂಡಳು. ಅವರ ಸಮೀಪವೇ ರತ್ನಖಚಿತವಾದ ಮತ್ತು ದೇದೀಪ್ಯಮಾನ ದಿವ್ಯ ವಿಮಾನವನ್ನೂ ಅದರ ಮೇಲೆ ಸದ್ಗುರು ಸಮಾನರೂಪುಳ್ಳ ಇಬ್ಬರು ಪುರುಷರನ್ನೂ ಕಂಡಳು. ಹಿರೂಬಾಯಿಯ ಹಸ್ತವನ್ನು ಹಿಡಿದು ಸದ್ಗುರುಗಳು ವಿಮಾನದಲ್ಲಿ ಕೂಡ್ರಿಸಿದರು. ಆಗ ಆಕೆಗೆ

ಆಗಿರುವ ಆನಂದವನ್ನು ವರ್ಣಿಸಲಿಕ್ಕೆ ಶ್ರುತಿ ಶಾಸ್ತ್ರಾದಿಗಳಿಗೆ ಸಹಾ ಅಸಾಧ್ಯವು. ಅಂಥಾ ಈ ಆನಂದದೊಳಗೆ ಲೀನಳಾಗಿ, ಪುತ್ರ ಪೌತ್ರಾದಿಕರನ್ನು ಸಹಾ ಮರೆತುಬಿಟ್ಟಳು. ತನ್ನ ಮನುಜತ್ವವನ್ನೂ ಮರೆತ ಆಕೆಯ ಚಿತ್ತವು ಆನಂದದಲ್ಲಿ ಮಗ್ನವಾಯಿತು. ಸಮೀಪದಲ್ಲಿಯೇ ಮಗನಾದ ವಿರೂಪಾಕ್ಷನಿದ್ದನು. ಆದರೆ ಇದೇನೂ ಆತನಿಗೆ ತಿಳಿಯದೆ ಒಂದು ಕ್ಷಣಮಾತ್ರ ಪ್ರಕಾಶವನ್ನು ಕಂಡನು. "ಸಿದ್ಧಾರೂಢಾ " ಎಂಬ ನಾಮವನ್ನು ಉಚ್ಚರಿಸಿದ ಕೂಡಲೇ ಆಕೆಯ ಪ್ರಾಣವು ಹೋಯಿತು. ಆ ಕ್ಷಣವೇ ಆ ಪ್ರಕಾಶವು ವಿರೂಪಾಕ್ಷನಿಗೆ ಕಾಣಿಸಿತು. ಆಮೇಲೆ ಮನೆಯ ಹಾಗೂ ನೆರಮನೆಯ ಎಲ್ಲ ಜನರು ಕೂಡಿ ಭಜನೆ ಮಾಡುತ್ತಾ ಬಹು ವೈಭವದಿಂದ ಆ ಪುಣ್ಯ ಶರೀರವನ್ನು ಸ್ಮಶಾನಕ್ಕೆ ಒಯ್ದು ದಹಿಸುವಂಥವರಾದರು. ಈ ಪ್ರಕಾರ ಸದ್ಗುರು ಮಹಾರಾಯನು ಕಾಲನಿಗೆ ಪರಾಜಯವನ್ನು ಮಾಡಿ, ತನ್ನ ನಿರಾಮಯನಾದ ಪದವನ್ನು ನಾಮವನ್ನು ಜಪಿಸಿದ ಮಾತ್ರಕ್ಕೆ ಭಕ್ತಳಿಗೆ ಕೊಟ್ಟನು. ಈಗ ಕಥೆಯ ಲಕ್ಷ್ಯಾರ್ಥವನ್ನು ಶ್ರವಣ

ಮಾಡುವಂಥವರಾಗಿರಿ, ಹಿರೂಬಾಯಿಯೆಂಬ ಮುಮುಕ್ಷು ಜೀವನು, ಬೋಧವೆಂಬ ಪುರಾಣ ಕೇಳಲಿಕ್ಕೆ ಹೋಗುವಾಗ, ಪ್ರಾರಬ್ಧ ಭೋಗವು ಅಡ್ಡ ಬರುವಂಥದ್ದಾಯಿತು. ವೈರಾಗ್ಯವೆಂಬ ಕಾಲಿಗೆ ಮೋಹವೆಂಬ ಕಲ್ಲು ತಗಲಿ, ಅಭಿಮಾನ ಗೃಹದಿಂದ ಹೊರಬೀಳಲಾಗದೆ, ಬೋಧ ಶ್ರವಣಕ್ಕೆ ಪ್ರತಿಬಂಧಕವಾಯಿತು. ಆದರೆ ವಿವೇಕ ಒಂದು ಉಳಿಯಿತು. ಆ ವಿವೇಕದ ಬಲದಿಂದ, ಸ್ವರೂಪಾಕಾರ ವೃತ್ತಿ ಎಂಬ ನಾಮಸ್ಮರಣೆ ಮಾಡುತ್ತಿರುವಾಗ ಕ್ರೋಧ ಲೋಭಗಳೆಂಬ ಇಬ್ಬರು ನಿರ್ದಯರಾದ ಯಮದೂತರು ಅಕಸ್ಮಾತ್ತಾಗಿ ಬಂದರು. ಜೀವನಿಗೆ ಅವರು ನರಕಕ್ಕೆ ಒಯ್ಯಲಿಕ್ಕೆ ಬರುತ್ತಿದ್ದು, ಅವರನ್ನು ನೋಡಿ, ಜೀವನು ಸ್ವರೂಪಾಕಾರ ವೃತ್ತಿ ಮಾಡಿದ್ದರಿಂದ, ಅವರು ಭಯಗ್ರಸ್ತರಾಗಿ ಓಡಿ ಹೋದವರು ತಿರುಗಿ ಬರಲೇ ಇಲ್ಲ. ಸ್ವರೂಪವೆಂಬ ಸದ್ಗುರುವಿನಲ್ಲಿ ಐಕ್ಯವಾಗಲಿಕ್ಕೆ ಜೀವನಿಗೆ ಷಟ್‌ಸಂಪತ್ತಿ ಎಂಬ ಆರು ತಿಂಗಳು ಬೇಕಾಗಿರುತ್ತವೇ. ಅವು ಪೂರ್ಣವಾದ ಮೇಲೆ ಸದ್ಗುರುವು ಬಂದು ಜೀವೇಶರೈಕ್ಯವನ್ನು ಮಾಡಿಸಿ ಬಿಟ್ಟನು. ಈ

ಪ್ರಕಾರವಿರುವ ಐಕ್ಯತೆಯ ಕಥೆಯನ್ನು ಯಾವಾತನು ಶ್ರವಣ ಮಾಡುವನೋ ಆತನು ಸದ್ಗುರು ಕೃಪೆಯಿಂದ ಷಡ್ರಿಪುಗಳನ್ನು ಜಯಿಸಿ, ಶಿವೈಕ್ಯವನ್ನು ಹೊಂದುವನು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮನೋಹರವಾದ ಈ ನಾಲ್ವತ್ತೊಂದನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು,